STRONG WOMEN STRONGER WORLD 2021-2024
WORK WONDERS Inner Wheel 2022-23
ಅರಳು ಮಲ್ಲಿಗೆ
Aralu Mallige
Charter No. 2823
Dist. 318 India
Inner Wheel Club of Mysore Midtown
Issue 05 * Nov. 2022

# Looking Back .........



Thanks to the concerted efforts of our parent club, Inner Wheel club of Mysore West, our club was formed in October 1983. We were fourteen young women, all wives of Rotarians and we were very involved in all the activities of Rotary. The Rotary Club of Mysore Midtown sponsored our club and in November 1983 we received our Charter from International Inner Wheel and became a part of the world's largest women's service organization!

This year we enter our 40th year and looking back at the journey so far, I am filled with a sense of immense gratitude, a feeling of satisfaction and joy.

We started off with small projects and bonding activities like picnics and games. Today we take up mega projects impacting the community and we also organize and host district events. Two of our members have led the district as District Chairmen and this year we boast of a Chairman's Group Representative.

Today we are 45 members in the age group of 30 to 70 years. Every single member has blended into the milieu of Inner Wheel which is friendship and service. Our members are multifaceted and each one brings in a fresh new idea or talent. Inner Wheel has served as a platform for many members



to portray and develop various skills such as public speaking skills, writing skills, dramatics, music, dance, entrepreneurial skills and also to hone other social skills.

We the charter members are very grateful to Inner Wheel for molding us and helping us to do our bit to the community.


Long live Inner Wheel Club of Mysore Midtown.

**- PDC. Chandrika Raghu**



# ಕನ್ನಡ ರಾಜ್ಯೋತ್ಸವ











ನವೆಂಬರ್ 1ನೇ ತಾರೀಖ್ ಅಂದು ಎಲ್ಲ ಕಡಿ ಅಂದ್ರ ನಮ್ ಕರ್ನಾಟಕದಾಗ ಮಂದಿಯೆಲ್ಲ ಕನ್ನಡ ಭಾಷಿ ಬಗ್ಗೆ ಭಾಳ್ ಮಾತಾಡೋದು ಕೇಳತೈತಿ. ಸಾಲ್ಯಾಗ, ಕಾಲೇಜ್ನಾಗ, ಆಟೋ, ಬಸ್ಸು, ಕಛೇರಿ ಹಿಂಗ ಎಲ್ಲಾ ಕಡಿ ಕೆಂಪು ಹಳದಿ ಬಾವುಟ ಹಾರಿಸ್ತಾರಾ. ನಿಮಗೆ ಗೊತ್ತಿರ್ಬೇಕು ಇದು ನಮ್ಮ 67ನೇ ಕನ್ನಡ ರಾಜ್ಯೋತ್ಸವ. ಈ ಕನ್ನಡದ ಹಬ್ಬದ ಬಗ್ಗೆ ಸ್ವಲ್ಪ್ ತಿಳ್ಕೊಣನೇನ್ರೀ. ಇಲ್ ಓದಿ ಹಾಗಾದ್ರ....

ಆಲೂರ್ ವೆಂಕಟರಾಮ ಕರ್ನಾಟಕದ ಏಕಿಕರಣ ಚಳುವಳಿನ 1905ರಲ್ಲಿ ಶುರು ಮಾಡಿದ್ದರು. ಅದಕ್ಕೆ ಅವರನ್ನ ಕನ್ನಡದ ಕುಲ ಪುರೋಹಿತ ಅಂತ ಕರೀತಾರ. ಈಗಿನ ಕರ್ನಾಟಕ, ಮೊದಲು ಮೈಸೂರು ರಾಜ್ಯ ಇತ್ತಿ. 1956ರಲ್ಲಿ ಮೈಸೂರು ರಾಜ್ಯ ನಿರ್ಮಾಣ ವಾದಾಗ ಅದರೊಳಗೆ ಮೈಸೂರು ಸಂಸ್ಥಾನ, ಹೈದೆರಾಬಾದ್ ಕರ್ನಾಟಕ, ಮದ್ರಾಸ್ ಕರ್ನಾಟಕ ಹಾಗು ಮುಂಬೈ ಕರ್ನಾಟಕ ಹಿಂಗ 4 ಭಾಗವಾಗಿತ್ತು. ಮೈಸೂರು ಸಂಸ್ಥಾನ ಬಹುತೇಕ ಪ್ರದೇಶವನ್ನು ಒಳಗೊಂಡಿತ್ತು. 1956ರಲ್ಲಿ, ಉತ್ತರ ಕರ್ನಾಟಕದ ಜನರು ಮೈಸೂರು ಹೆಸರನ್ನು ಉಳಿಸಿಕೊಳ್ಳಲು ಒಲವು ತೋರಲಿಲ್ಲ ಏಕೆಂದರೆ ಇದು ಹಿಂದಿನ ಸಂಸ್ಥಾನ ಹಾಗು ಹೊಸ ರಾಜ್ಯದ ದಕ್ಷಿಣ ಪ್ರದೇಶಗಳೊಂದಿಗೆ ನಿಕಟ ಸಂಭಂದ ಹೊಂದಿತ್ತು. ಅದು ರಾಜಕೀಯವಾಗಿ ಒಂದಾಗಿ ದಕ್ಷಿಣ ಭಾರತದ ಕನ್ನಡ ಭಾಷೆ ಮಾತನಾಡುವ ಎಲ್ಲಾ ಪ್ರದೇಶಗಳನ್ನು ಒಂದು ರಾಜ್ಯವಾಗಿಸಿ, ಕರ್ನಾಟಕ ರಾಜ್ಯ ಎಂದು ನವೆಂಬರ್ 1, 1973ರಂದು ಘೋಷಿಸಿದರು. ಈ ಘೋಷಣೆ ಮಾಡಿದ ದಿನವೇ ಕನ್ನಡ ರಾಜ್ಯೋತ್ಸವಾಗಿ ಆಚರಿಸುತ್ತೇವೆ. ಅಂದು ದೇವರಾಜ ಅರಸ್ ಮುಖ್ಯಮಂತ್ರಿ ಆಗಿದ್ದರು. ಇನ್ನು ಕರ್ನಾಟಕ ಏಕೀಕರಣಕ್ಕೆ ಶ್ರಮಿಸಿದಂತಹ ನಮ್ಮ ಕವಿಗಳು ಬಿ. ಎಂ. ಶ್ರೀಕಂಠಯ್ಯ, ಕುವೆಂಪು, ಎ.ಎನ್. ಕೃಷ್ಣರಾವ್ ಮತ್ತು ಶಿವರಾಮ ಕಾರಂತ್ ರವರು. ನಮ್ಮ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಡಾ. ಮಹೇಶ್ ಜೋಶಿ, ನವೆಂಬರ್ 1 ರಂದು ಕರ್ನಾಟಕ ರತ್ನ ಪ್ರಶಸ್ತಿ, ಮನೆ ಮನೆ ಕನ್ನಡ ಧ್ವಜ, ಕೋಟಿ ಕಂಠ ಗಾಯನ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಕನ್ನಡದ ಭಾಷೆಯ ಉಳಿವಿಗಾಗಿ ಕೆಲಸ ಮಾಡುತ್ತಿದ್ದಾರೆ. ಗೆಳತಿಯರೆ, ನಾವು ಸಹ ಕನ್ನಡ ಭಾಷೆಯನ್ನು ಉಳಿಸಿ ಬೆಳಸಬೇಕು. ನಾವು ಎಂದಿಗೂ ನವೆಂಬರ್ 1 ಕನ್ನಡಿಗ ನಾಗುವ ಬದಲು ನಂ. 1 ಕನ್ನಡಿಗರಾಗೋಣ.

ಪ್ರತಿ ದಿನದ ಪ್ರಾರಂಭ ಕನ್ನಡದಿಂದ ; ಪ್ರತಿ ದಿನದ ಅಂತ್ಯ ಕನ್ನಡದಿಂದ

ಕನ್ನಡವಿಲ್ಲದ ಜೀವನ ನಮ್ಮದಲ್ಲ ; ಕನ್ನಡ ಕಸ್ತೂರಿ ನಮಗೆಲ್ಲ
ಹಚ್ಚೋಣ ಕನ್ನಡದ ದೀಪವನ್ನ.

**ಸಿರಿಗನ್ನಡಂ ಗೆಲ್ಗೆ, ಸಿರಿಗನ್ನಡಂ ಬಾಳ್ಗೆ, ಸಿರಿಗನ್ನಡಂ ಏಳ್ಗೆ !!**

**– ಪಿಪಿ. ಸವಿತಾ ವೆಂಕಟೇಶ್**

## ಅಧ್ಯಕ್ಷರ ನುಡಿ...

ನವೆಂಬರ್ ತಿಂಗಳು – ನಮ್ಮೆಲ್ಲರಿಗೂ ಹಬ್ಬದ ಸಂಭ್ರಮ. ಇದು ಕನ್ನಡ ರಾಜ್ಯೋತ್ಸವ ಮತ್ತು ನಮ್ಮ ಕ್ಲಬ್‌ನ ಹುಟ್ಟುಹಬ್ಬದ ತಿಂಗಳು

ಎಲ್ಲರಿಗೂ ಕನ್ನಡ ರಾಜ್ಯೋತ್ಸವದ ಶುಭಾಶಯಗಳು.

ನಾವು ನಮ್ಮ ಕ್ಲಬ್ಬಿನ ಸಮಾಜ ಸೇವೆಯ 40ನೇ ವರ್ಷಕ್ಕೆ ಕಾಲಿಡುತ್ತಿದ್ದೇವೆ. ನಮ್ಮ ಚಾರ್ಟರ್ ಸದಸ್ಯರು ನಮ್ಮೆಲ್ಲರಿಗೂ ಸದಾ ದಾರಿ ದೀಪಗಳು. ನಮ್ಮ ಮಾರ್ಗದರ್ಶಿಗಳು. ನಾವೆಲ್ಲರೂ ಅವರು ಹಾಕಿಕೊಟ್ಟ ಹಾದಿಯನ್ನೇ ಅನುಸರಿಸುತ್ತಿದ್ದೇವೆ. ನಮ್ಮ ಕ್ಲಬ್‌ಅನ್ನು ಜಿಲ್ಲೆಯಲ್ಲಿ ಮುಂಚೂಣಿಗೆ ತರಲು ನಿಸ್ವಾರ್ಥವಾಗಿ ಶ್ರಮಿಸಿದ ನಮ್ಮ ಕ್ಲಬ್‌ನ ಎಲ್ಲಾ ಹಿಂದಿನ ಅಧ್ಯಕ್ಷರ ಪ್ರಯತ್ನ, ನಿಸ್ವಾರ್ಥ ಸೇವೆ ಮತ್ತು ಸಾಧನೆಗಳ ಬಗ್ಗೆ ನಮಗೆ ಹೆಮ್ಮೆ ಇದೆ. ಈ 39 ವರ್ಷಗಳಲ್ಲಿ, ನಮ್ಮ ಕ್ಲಬ್ ಜಿಲ್ಲಾ rally, ಜಿಲ್ಲಾ assembly, ಜಿಲ್ಲಾ ಸಮ್ಮೇಳನ, ISO ಮೀಟ್ ಮತ್ತು outh zone meet ಅನ್ನು ಸಹ ಆಯೋಜಿಸಿದೆ. ನಮ್ಮ ಕ್ಲಬ್‌ನಿಂದ ಇಬ್ಬರು ಹಿಂದಿನ ಜಿಲ್ಲಾಧ್ಯಕ್ಷರನ್ನು ಹೊಂದಲು ನಮಗೆ ಹೆಮ್ಮೆಯೆನಿಸುತ್ತದೆ.

ಅಮಿತ ಹರೀಶ್ ಅವರ ಅಧ್ಯಕ್ಷತೆಯಲ್ಲಿ ನಾವು, ನಮ್ಮದೇ ಆದ ಮಾಸಿಕ ಸುದ್ದಿಪತ್ರ – ಅರಳು ಮಲ್ಲಿಗೆಯನ್ನು ಪ್ರಾರಂಭಿಸಿದ್ದೇವೆ. ನಮ್ಮ ಕ್ಲಬ್ 40 ನೇ ವರ್ಷಕ್ಕೆ ಕಾಲಿಡುತ್ತಿರುವ ಈ ಸಮಯ ನಿಜಕ್ಕೂ ನಮಗೆ ಅವಿಸ್ಮರಣೀಯ ಕ್ಷಣವಾಗಿದೆ. ಚಾರ್ಟರ್ ಸದಸ್ಯರು, ಪಿಡಿಸಿಗಳು, ಎಲ್ಲಾ ಹಿಂದಿನ ಅಧ್ಯಕ್ಷರ ಅನುಭವ ಮತ್ತು ಮಾರ್ಗದರ್ಶನ, ಮತ್ತು ಸೇವೆ ಸಲ್ಲಿಸಲು ಸದಾ ಸಿದ್ಧರಿರುವ ಸದಸ್ಯರದೊಂದಿಗೆ, ನಮ್ಮ ಕ್ಲಬ್ ಜಿಲ್ಲೆಯಲ್ಲಿ ಹೆಚ್ಚಿನ ಎತ್ತರವನ್ನು ತಲುಪುತ್ತದೆ ಎಂದು ನನಗೆ ಖಾತ್ರಿಯಿದೆ.

## ಸಂಪಾದಕೀಯ

ಹಚ್ಚೇವು ಕನ್ನಡದ ದೀಪ... ಕನ್ನಡ ರಾಜ್ಯೋತ್ಸವದ ಈ ಜ್ಯೋತಿ ನಮ್ಮ ಕ್ಲಬ್ಬಿನ ಚಟುವಟಿಕೆಗಳಿಗೆ ದಾರಿ ದೀಪವಾಗಲಿ ಎಂದು ಹಾರೈಸುತ್ತೇನೆ. ಮತ್ತೊಂದು ಹೆಮ್ಮೆಯ ವಿಚಾರ, ನಮ್ಮ ಕ್ಲಬ್ 40ನೇ ವರ್ಷಕ್ಕೆ ಯಶಸ್ವಿಯಾಗಿ ಕಾಲಿಟ್ಟಿದೆ. ಇದಕ್ಕೆ ಕಾರಣ, ಭದ್ರ ಬುನಾದಿ ಹಾಕಿಕೊಟ್ಟಿರುವ ನಮ್ಮ ಚಾರ್ಟರ್ ಸದಸ್ಯರು ಮತ್ತು ಆಧಾರ ಸ್ತಂಭವಾಗಿರುವ ನಮ್ಮ ಪಿಡಿಸಿಗಳು ಹಾಗೂ ಹಿಂದಿನ ಅಧ್ಯಕ್ಷರು. ಅವರ ಮಾರ್ಗ ದರ್ಶನದಲ್ಲಿ ನಮ್ಮ ಕ್ಲಬ್ಬಿನ ಸಮಾಜ ಸೇವೆ ಹೀಗೆ ಸುಗಮವಾಗಿ ಮುಂದುವರೆಯಲಿ ಎಂದು ಆಶಿಸುತ್ತೇನೆ.

ರಾಜ್ಯೋತ್ಸವದ ಈ ಸಂಧರ್ಭದಲ್ಲಿ ಈ ಸಂಚಿಕೆಯನ್ನು ಕನ್ನಡದಲ್ಲಿ ತರುವ ಪ್ರಯತ್ನ ಮಾಡಿದ್ದೇನೆ. ನನ್ನ ಮಾತೃ ಭಾಷೆಯನ್ನು ಔಪಚಾರಿಕ ಸ್ವರೂಪದಲ್ಲಿ ಉಪಯೋಗಿಸುವುದು ಇಷ್ಟು ದೊಡ್ಡ ಸವಾಲೆನಿಸುತ್ತದೆ ಎಂದು ನಾನು ಎಣಿಸಿರಲಿಲ್ಲ. ನಮ್ಮ ಕನ್ನಡದ ಲೇಖಕರಿಗೆ, ಕವಿಗಳಿಗೆ, ಸಾಹಿತಿಗಳಿಗೆ ನನ್ನದೊಂದು ನಮನವಿರಲಿ, ಹಾಗೆಯೇ ನನ್ನ ಪದ ಬಳಕೆಯಲ್ಲಿ ಆಭಾಸವಾಗಿದ್ದರೆ ನಿಮ್ಮದೊಂದು ಕ್ಷಮೆಯಿರಲಿ ಎಂದು ಹೇಳುತ್ತಾ ಈ ಸಂಚಿಕೆಯನ್ನು ಸಮರ್ಪಿಸುತ್ತೇನೆ....

# ದೋಸ್ತಿ – ಐ ಏಸ್ ಓ ಮೀಟ್ 2022–23




ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರು ಏರ್ಪಡಿಸಿದ್ದ ಐ ಏಸ್ ಓ ಮೀಟ್ – ದೋಸ್ತಿ, ಏಕ್ ಭಡಿಯಾ, ಮಸ್ತಿ ಭರ ಸಮಾರಂಭ್ ಥ!! ಡಿಸ್ಟ್ರಿಕ್ಟ್ ಛೇರ್ಮನ್ ಕವಿತಾ ನೀಯತ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪಾಸ್ಟ್ ಡಿಸ್ಟ್ರಿಕ್ಟ್ ಚೇರ್ಮನ್ ಹಾಗು ಇತರೆ ಗಣ್ಯರು ಹಾಜರಾತಿ ಹಾಕಿದ್ದರು. ನಮ್ಮ ಕ್ಲಬ್ಬಿನಿಂದ ಪಿಡಿಸಿ ಚಂದ್ರಿಕಾ ರಘು, ಪಿಡಿಸಿ ಅನುರಾಧ ನಂದಕುಮಾರ್, ಪ್ರೆಸಿಡೆಂಟ್ ವಿಮಲಾ ನಾಗರಾಜ ಇವರೊಂದಿಗೆ ನಾವು ಕೆಲವು ಮೆಂಬರ್ಸ್ ಭಾಗವಹಿಸಿದ್ದೆವು. ಡಿಸ್ಟ್ರಿಕ್ಟ್ ಐಏಸ್ಓ ಉಮಾ ಮಹೇಶ್‌ರವರ ಸಾರಥ್ಯದಲ್ಲಿ ನಡೆದ ಈ ಸಮಾರಂಭವನ್ನು ವಿ.ಕೆ.ಫಂಕ್ಷನ್‌ಹಾಲ್, ಮೈಸೂರಿನಲ್ಲಿ ಆಯೋಜಿಸಲಾಗಿತ್ತು. ಸ್ಥಳವನ್ನು ಸುಂದರ ಪುಷ್ಪಗಳು ಹಾಗು ಕಲಾತ್ಮಕ ವಿನ್ಯಾಸಗಳಿಂದ ಅಲಂಕರಿಸಲಾಗಿದ್ದು ನೋಡಲು ಮನೋಹರ ವಾಗಿತ್ತು. ಬೆಳಗಿನ ಉಪಹಾರದ ನಂತರ ಎಲ್ಲರನ್ನು ಸ್ವಾಗತಿಸಿ ಕಾರ್ಯಕ್ರಮವನ್ನು "ಶ್ರೀ ಗಣೇಶ್" ಮಾಡಲಾಯಿತು. ಹಲವು ಮನೋರಂಜನಾ ಕಾರ್ಯಕ್ರಮಗಳನ್ನು ಹಮ್ಮಿಕೊಂಡ್ಡಿದ್ದರು. ಐಸ್‌ಓ ಕ್ವೀನ್ ಕಾಂಟೆಸ್ಟಿನ – ಮನೋಹರಿಯರ ಮನೋಹರ ರಾಂಪ್ ವಾಕ್, ಮೋಜಿನ ಆಟಗಳು, ಕಾಂಟೆಂಪರರಿ ಸಾಂಗ್ ಮೆಡ್ಲಿಗೆ ಒಂದು ಸೊಗಸಾದ ನೃತ್ಯ, ಸಾಂಗ್ ಕಾಂಪಿಟಿಷನ್, ಇವೆಲ್ಲದಕ್ಕೂ ಕಳಶಪ್ರಾಯದಂತೆ ಕಂಸಾಳೆ ನೃತ್ಯ ಬಹಳ ಸೊಗಸಾಗಿ ಮೂಡಿಬಂದಿತ್ತು.

ಕಂಸಾಳೆ ನೃತ್ಯವು ಮೈಸೂರು ಕರ್ನಾಟಕ ಪ್ರದೇಶದಲ್ಲಿ ಹುಟ್ಟಿದ್ದು ಶ್ರೀ ಮಲೆ ಮಹದೇಶ್ವರ ಸ್ವಾಮಿಗೆ ಪ್ರಿಯವಾದ ಒಂದು ಜಾನಪದ ನೃತ್ಯ ಎಂದು ಭಾವಿಸಲಾಗಿದೆ. ಒಂದು ಕಂಚಿನ ಡಿಸ್ಕ್ ಹಾಗು ಒಂದು ತಾಳ ಕೈಯಲ್ಲಿ ಹಿಡಿದು ಹಾಡಿಗೆ ಲಯಬದ್ಧವಾಗಿ ಹೆಜ್ಜೆ ಹಾಕುತ್ತಾರೆ. ಈ ಅನನ್ಯವಾದ ನೃತ್ಯವನ್ನು ಮಾಡುವುದು ಎಷ್ಟು ಕಠಿಣವೊ, ನೋಡಲು ಅಷ್ಟೇ ಮನೋಹರ. ಈ ನೃತ್ಯವನ್ನು ಪರಿಪೂರ್ಣವಾಗಿ ನಡೆಸಿಕೊಟ್ಟ ನಮ್ಮ ಇನ್ನರ್ ವೀಲ್ ಮೈಸೂರಿನ ಸಿಸ್ಟರ್ಸ್‌ಗೆ ಹೃತ್ಪೂರ್ವಕ ಅಭಿನಂದನೆಗಳು.

ನಂತರ ನಿಪುಣ ವೈದ್ಯರಿಂದ ಸರ್ವಿಕಲ್ ಕ್ಯಾನ್ಸರ್ ಖಾಯಿಲೆಯ ಬಗ್ಗೆ ಮಾಹಿತಿಗಳನ್ನು ತಿಳಿಪಡಿಸಿದರು. ಕೊನೆಯದಾಗಿ, ಅತ್ಯಾಸಕ್ತಿಯಿಂದ ಕಾಯುತ್ತಿದ್ದ ಬ್ಯೂಟಿ ಕಾಂಟೆಸ್ಟಿನ ವಿಜೇತರನ್ನು, ಜ್ಯೂರಿನಲ್ಲಿ ಒಬ್ಬರಾದ ನಮ್ಮ ಕ್ಲಬ್ಬಿನ ಪಿಡಿಸಿ ಚಂದ್ರಿಕಾ ರಘುರವರು ಘೋಷಿಸಿದ ನಂತರ ಕ್ರೌನ್ ಹಾಗು ಸಾಶ್ ತೊಡಿಸಿ ಪ್ರಶಸ್ತಿ ಪ್ರಧಾನ ಮಾಡಲಾಯಿತು. ಸಮಾರಂಭದ ಮಧ್ಯೆ ಮಧ್ಯೆ ಲಕ್ಕಿ ಡಿಪ್‌ನಲ್ಲಿ ಹಲವು ಮೆಂಬರ್ಸ್ ಪ್ರಶಸ್ತಿಗಳನ್ನು ಗೆದ್ದರು. ನಮ್ಮ ಕ್ಲಬ್ಬಿನಿಂದ ಪ್ರೆಸಿಡೆಂಟ್ ವಿಮಲಾ ನಾಗರಾಜ್, ಎಡಿಟರ್ ಸವಿತಾ ಶ್ರೀನಾಥ್ ಹಾಗು ಕುಸುಮ ಚಂದ್ರಶೇಖರ್ ಲಕ್ಕಿ ಲೇಡೀಸ್ ಆದೆವು. ಲೇಡೀಸ್ ಇದ್ದಲ್ಲಿ ಶಾಪಿಂಗ್ ಇರಲೇ ಬೇಕಲ್ಲವೇ!! ಹಸಿರು ಗಿಡಗಳಿಂದ ಪ್ರಾರಂಭಗೊಂಡು, ಸೀರೆ, ಡ್ರೆಸ್, ಏಕ್ವೇರ್, ಇನ್ನಿತರೇ ಸ್ಟಾಲ್ಸ್‌ಗಳಿದ್ದವು. ತಕ್ಕಮಟ್ಟಿಗೆ ಶಾಪಿಂಗೂ ಪೂರೈಸಿದೆವು. ಸೆಲ್ಫಿ ಕ್ಲಿಕ್ಕಿಸಿ ಡೈನಿಂಗ್ ಹಾಲ್ ಕಡೆಗೆ ನಡೆದೆವು. ಬೆಳಗ್ಗಿನ ಉಪಹಾರ, ಸ್ನಾಕ್ಸ್, ಮಧ್ಯಾಹ್ನದ ಊಟ ಎಲ್ಲವೂ ಬಹಳ ರುಚಿಯಾಗಿತ್ತು. ಕಾರ್ತಿಕ ಮಾಸದ ಪ್ರಯುಕ್ತ ಶ್ರೀ ಗಣೇಶನ ಮೂರ್ತಿಯ ಮುಂದೆ ದೀಪವನ್ನು ಬೆಳಗಿಸಿ ಸವಿ ಸವಿ ನೆನಪಿನೊಂದಿಗೆ ನಮ್ಮ ನಮ್ಮ ಮನೆಗಳಿಗೆ ಹಿಂತಿರುಗಿದೆವು.

ಇಷ್ಟು ಚೆಂದವಾಗಿ, ಪ್ರತಿಯೊಂದು ವಿಷಯದಲ್ಲೂ ವಯುಕ್ತಿಕವಾದ ಗಮನ ಹರಿಸಿ, ಬಹಳ ಸೊಗಸಾಗಿ ಸಮಾರಂಭವನ್ನು ಏರ್ಪಡಿಸಿದಕ್ಕಾಗಿ, ಡಿಸ್ಟ್ರಿಕ್ಟ್ ಐಸ್‌ಓ ಉಮಾ ಮಹೇಶ್, ಇನ್ನರ್ ವೀಲ್ ಕ್ಲಬ್ ಆಫ್ ಮೈಸೂರಿನ ಪ್ರೆಸಿಡೆಂಟ್ ಹಾಗು ಸದಸ್ಯರಿಗೆ ನಮ್ಮ ಕ್ಲಬ್ಬಿನ ಪರವಾಗಿ ಧನ್ಯವಾದಗಳು.

– ಸವಿತಾ ಶ್ರೀನಾಥ್



# ದೀಪೋತ್ಸವ



**ದೀಪಂ ಜ್ಯೋತಿ ಪರಬ್ರಹ್ಮ**
**ದೀಪಂ ಸರ್ವ ತಮೋಪಹರಂ ।**
**ಇಷ್ಟ ಕಾಮ್ಯಾರ್ಥ ಸಿದ್ಧ್ಯರ್ಥಂ**
**ದೀಪಂ ಪ್ರಾಜ್ವಲ್ಯಮಾಮ್ಯಹಮ್ ॥**

ಪಂಚಭೂತಗಳ್ಳಲಿ ಒಂದಾದ ಅಗ್ನಿಯ ಶಾಂತ ಸ್ವರೂಪವೇ ಈ ದೀಪ. ಇದು ಅಜ್ಞಾನವೆಂಬ ಅಂಧಕಾರವನ್ನು ತೊಲಗಿಸಿ ಜ್ಞಾನವೆಂಬ ಬೆಳಕಿನಿಂದ ಮನೆ ಮನಗಳನ್ನು ಬೆಳಗುತ್ತದೆ. ನಮ್ಮ ಪ್ರಾರ್ಥನೆಯನ್ನು ಭಗವಂತನಿಗೆ ತಲುಪಿಸುವ ಮಾಧ್ಯಮ ಈ ದೀಪ ಎಂದು ನಾವು ಭಾವಿಸಿದ್ದೇವೆ. ನಮ್ಮ ಶ್ರದ್ಧಾ ಭಕ್ತಿಗಳ ಸಂಕೇತವಾದ ದೀಪವನ್ನು ನಾವೆಲ್ಲರೂ ಬೆಳಗಿ ಆನಂದಿಸಿದ್ದೇವೆ. ನಮ್ಮ ಪ್ರೆಸಿಡೆಂಟ್ ವಿಮಲಾ ನಾಗರಾಜ್ ಮನೆಯನ್ನು ದೀಪಾವಳಿಯಂದು ಹೀಗೆ ಅಲಂಕರಿಸಿದ್ದರು.





ನಮ್ಮ ಗೆಳತಿ ಪ್ರೆಸಿಡೆಂಟ್ ವಿಮಲಾರ ಕಲಾತ್ಮಕ ಸಾಮರ್ಥ್ಯವನ್ನು ನಾವೆಲ್ಲರೂ ನೋಡಿಯೇ ಇದ್ದೇವೆ. ಅವರ ಹೊಸರುಚಿಯ ಬಗ್ಗೆಗಿನ ಆಸಕ್ತಿಯು ನಮಗೆ ಹೊಸದೇನಲ್ಲ. ಚಾಟ್ಸ್, ಫಿಂಗರ್ ಫುಡ್, ಬಾದಾಮಿ ಹಾಲು ಹೀಗೆ ಏನನ್ನಾದರೂ ತಿನಿಸದೆ ಕಳಿಸುವುದೇಯಿಲ್ಲ. ಸ್ವೀಟ್ ಸ್ಟೈಲೊಂದಿಗೆ ಸರ್ವ್ ಮಾಡುತ್ತಾರೆ ನಾವು ಎಂಜಾಯ್ ಮಾಡುತ್ತೇವೆ. ಇಂಟೀರಿಯರ್ ಡೆಕೋರೇಷನ್, ಕಲಾತ್ಮಕ ವಿನ್ಯಾಸಗಳನ್ನು ಮನೆಯಲ್ಲೇ ಮಾಡುವುದು, ಇವೆಲ್ಲದರ ಬಗೆಗಿನ ಆಸಕ್ತಿ ಅವರಿಗೆ ಸಹಜವಾಗಿಯೇ ಮೂಡಿತು. ಅವರ ಈ ಹಾಬಿ ಅವರ ಮನೆಯವರೆಲ್ಲರ ಮೇಲೂ ಪ್ರಭಾವ ಬೀರಿದೆ. ಇದ್ದನ್ನ ನಾವೆಲ್ಲರೂ ಇನ್ಸ್ಟಾಲೇಷನ್ ಫಂಕ್ಷನ್ನಲ್ಲಿ ನೋಡಿದ್ದೇವೆ. ಗೆಳತಿಯರೆ, ನಾವು ಸಹ ನಮ್ಮ ಮನೆ ಇಂಟೀರಿಯರ್ ಡೆಕೋರೇಷನ್‌ಗೆ ನಮ್ಮ ವಿಮಲಾನೇ ಕೇಳಬಹುದುದಲ್ಲವೇ, ಏನಂತೀರಾ?



# ಚುಮು ಚುಮು ಚಳಿಯ Special. . .

## Chargrilled Vegetable Salad



The Chargrilled vegetable salad recipe is a delicious winter salad that is tossed in herbs and has a sweet and tangy dressing. These vegetables are grilled in a cast iron pan. Grilling the vegetables on a cast iron grill not only leaves good indents on the vegetables, but are juicy and yet crisp and flavourful. The dressing called for red wine vinegar, smoked paprika and cumin seeds with Tabasco pepper sauce to add to the zing and zang of the salad.

1 Green zucchini, cut into rounds

1 Red Bell pepper (Capsicum), cut into wedges

1 Orange Bell pepper (Capsicum), cut into wedges

1 Eggplant, cut into rounds

1 Onion, cut into wedges

1 tablespoon Extra Virgin Olive Oil

Salt to taste

**For Dressing**

1 teaspoon Dried basil leaves

1 teaspoon Dried oregano

1 tablespoon Extra Virgin Olive Oil

1 teaspoon Red Wine Vinaigrette or lime juice

1 teaspoon Honey

1 teaspoon Tabasco Original - Hot Sauce

Salt to taste

To begin, on a cast iron stove top grill or any other griddle pan, heat 2 tablespoons of olive oil on medium heat. Place all the vegetables on the pan and grill them on both sides until striped and softened. Once grilled, remove from the pan and arrange them on a platter you wish to serve. Allow it to cool. In a small bowl, combine all the ingredients for the dressing. When you are ready to serve the salad, drizzle the dressing over the plated vegetables, sprinkle some crumbled feta, roasted cumin seeds, paprika or red chilli powder and parsley and serve. All the ingredients are easily available in supermarkets.

---

## ಹಿತಕಿದ ಅವರೆಬೇಳೆ ಆಂಬೊಡೆ...



Winter month definitely calls for the season special, Avarekai recipes. This particular one is very easy & tastes amazing on nippy evenings.

**Ingredients :**

Avarebele - 2 cups

Green chillies - 7 to 8 or according to your preference.

Cumin - 1 teaspoon

1 small bunch coriander

1 big onion

Salt Blend avarebele, cumin & green chillies in a blender without adding water.

Add finely chopped onions, coriander & salt. Mix well.

Take small balls of the dough, press it between your palms to give it a shape of vada.

Heat oil in a pan & deep fry.

Soak extra oil in a tissue paper & serve it with tomato sauce or chutney.

For me, just a hot cup of coffee would suffice.

Enjoy



ದೀಪಾವಳಿಯ ದಿನದಂದು ಆಶಾ ಭವನದ ಹೆಣ್ಣು ಮಕ್ಕಳಿಗೆ 24 ಹೊಸ ಉಡುಗೆಗಳನ್ನು ನಮ್ಮ ಪ್ರೆಸಿಡೆಂಟ್ ವಿಮಲಾ ನಾಗರಾಜ್ ಉಡುಗೊರೆಯಾಗಿ ನೀಡಿದರು. ಮಕ್ಕಳ ಕಣ್ಣುಗಳಲ್ಲಿನ ಸಂತೋಷ ಹಾಗು ಮುಖದಲ್ಲಿನ ಮಂದಹಾಸ ನೋಡಿದಾಗ ತೃಪ್ತಿಕರವೆನಿಸುತ್ತಿತ್ತು .



ದೀಪಾವಳಿಯ ದಿನದಂದು, ರೋಟರಿ ಮಿಡ್ಟೌನ್ ಜೊತೆಗೂಡಿ, ಕಡಿಮೆ ಸವಲತ್ತಿನವರಿಗೆ ಸಿಹಿ ತಿನಿಸು ಹಾಗು ಪಟಾಕಿಗಳನ್ನು ಹಂಚಲಾಯಿತು. ಈ ಅವಕಾಶಕ್ಕಾಗಿ ಮಿಡ್ಟೌನ್ ಪ್ರೆಸಿಡೆಂಟ್ ನವೀನಚಂದ್ರರವರಿಗೆ ನಮ್ಮ ಧನವಾದಗಳನ್ನು ಈ ಮೂಲಕ ತಿಳಿಸುತ್ತೇವೆ.



ಜೆ.ಎಸ್.ಎಸ್ ಆಸ್ಪತ್ರೆಯ ವಯೋವೃದ್ಧ ವಿಭಾಗಕ್ಕೆ ಒಂದು ವೀಲ್ಚೇರ್ ದೇಣಿಗೆಯಾಗಿ ನೀಡಲಾಯಿತು. ಚಿಕಿತ್ಸೆಯ ಸಮಯದಲ್ಲಿ ಓಡಾಡಲು ಆಗದ ವೃದ್ಧ ರೋಗಿಗಳಿಗೆ ಸಹಕಾರಿಯಾಗಲಿದೆ. ಅವಕಾಶ ಕಲ್ಪಿಸಿದ ಡಾ. ಪ್ರತಿಭಾ ಹಾಗು ಆಡಳಿತ ಅಧಿಕಾರಿ ಮಿ. ಲೋಕೇಶ್ ಅವರಿಗೆ ನಮ್ಮ ವಂದನೆಗಳು.

## ಧ್ವಜ ಬದಲಾವಣೆ



ಮಧ್ಯ ಪ್ರದೇಶ ಕ್ಲಬ್ಬಿನ ಐಸ್‌ಓ ಪ್ರತಿಭಾ ಆಸ್ತಾ ಹಾಗು ಜಸ್ನ ಮಹಾರಾಷ್ಟ್ರದ ಸೋನಿಯಾ ಅವರ ಜೊತೆಯಲ್ಲಿ ನಮ್ಮ ಕ್ಲಬ್ಬಿನ ಫ್ಲಾಗ್ ಎಕ್ಸ್ಚೇಂಜ್ ಮಾಡಲಾಯಿತು.



ಸಂತ ಜೋಸೆಫ್ ಆಸ್ಪತ್ರೆಯ ಸ್ವಾಸ್ತ್ಯ ಫೌಂಡೇಶನ್ 3–15 ವರ್ಷಗಳ ಮಕ್ಕಳಿಗೆ ಸೀಳು ತುಟಿಯ ಶಸ್ತ್ರಚಿಕಿತ್ಸೆಗಳನ್ನು ಉಚಿತವಾಗಿ ಮಾಡಿಕೊಡುತ್ತಾರೆ. ನಮ್ಮ ಕ್ಲಬ್ಬಿನಿಂದ ₹10,000 ಕಿರುಕಾಣಿಕೆ ನೀಡಲಾಯಿತು.



20 ಕುರ್ಚಿಗಳು ಹಾಗು 140 ಶೈಕ್ಷಣಿಕ ಚಾರ್ಟ್‌ಗಳನ್ನು ಮಂಡ್ಯ ಜಿಲ್ಲೆಯ ನೋಡೆಕೊಪ್ಪಲು ಅಂಗನವಾಡಿ ಕೇಂದ್ರಕ್ಕೆ ಕೊಡಲಾಯಿತು.



ಕನ್ನಡ ರಾಜ್ಯೋತ್ಸವದ ಪ್ರಯುಕ್ತ ಉತ್ಸವವು ಕರ್ನಾಟಕ ಸರ್ಕಾರ ಏರ್ಪಡಿಸಿದ್ದ ಕೋಟಿ ಕಂಠ ಗಾಯನ ನಿಮಿತ್ತ, ಪ್ರೆಸಿಡೆಂಟ್ ವಿಮಲಾ ನಾಗರಾಜ್ ರವರ ನಿವಾಸದಲ್ಲಿ ಕೆಂಪು ಹಾಗು ಹಳದಿ ಸೀರೆಗಳನುಟ್ಟು ಕನ್ನಡ ಗೀತೆಗಳನ್ನು ಸುಮಧುರವಾಗಿ ಹಾಡಿದರು.

## ವಿಶಿಷ್ಟ–ಮಲ್ಟಿ ಡಿಸ್ಟ್ರಿಕ್ಟ್ ರ್‍ಯಾಲಿ 2022–23



ಡಿಸ್ಟ್ರಿಕ್ಟ್ 319 ವಿಶಿಷ್ಟ – ಮಲ್ಟಿ ಡಿಸ್ಟ್ರಿಕ್ಟ್ ರಾಲಿಯನ್ನು ನವೆಂಬರ್ 4&5ನೇ ತಾರೀಖಿನಿಂದು ಬೆಂಗಳೂರಿನಲ್ಲಿ ಆಯೋಜಿಸಿದ್ದರು. ಡಿಸ್ಟ್ರಿಕ್ಟ್ ಛೇರ್ಮನ್ ಕವಿತಾ ನಿಯತ್ ಡಿಸ್ಟ್ರಿಕ್ಟ್ 318ನ ಪ್ರತಿನಿಧಿಯಾಗಿದ್ದರು. ಪಿಡಿಸಿ ಅನುರಾಧ ನಂದಕುಮಾರ್ ರವರು ನಮ್ಮ ಕ್ಲಬ್ ಅನ್ನು ಪ್ರತಿನಿಧಿಸಿದರು. .



Mrs. Zenaida Farcon
IIW President



Mrs. Surjith Kaur
Association President



Mrs. Kavitha Niyath
Dist. Chairman



Mrs. Vimala Nagaraj
President



Mrs. Prabha Prahlad
Hon. Secretary



Mrs. Savitha Srinath
Editor